## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–5076/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 28/06/2017

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಮೊಹಮ್ಮದ್ ಮೀರಾ ವೈ, ಎಣ್ಣೆಹೊಳೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಮೊಹಮ್ಮದ್ ಮೀರಾ ವೈ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕಾರ್ಕಳ ತಾಲ್ಲೂಕಿನ ಮರ್ಣೆ ಗ್ರಾಮದ ಸರ್ವೆ ನಂಬರ್ 498/1ಎ1ಎ ಮತ್ತು 498/2 ರಲ್ಲಿ ಅಕ್ರಮವಾಗಿ ಕಟ್ಟಡವನ್ನು ಕಟ್ಟುತ್ತಿದ್ದು, ತಾವು ಈ ಬಗ್ಗೆ ದಿ:14/08/2012 ರಂದು 1ನೇ ಎದುರುದಾರರಾದ ಕಾರ್ಕಳದ ತಹಶೀಲ್ದಾರ್‌ರವರಿಗೆ ಅರ್ಜಿಯನ್ನು ನೀಡಿ ಅಕ್ರಮ ಕಟ್ಟಡ ತೆರವುಗೊಳಿಸಲು ಕೋರಿದ್ದೇನೆಂದು, ಸದರಿ ಕಟ್ಟಡದಿಂದ ತಮಗೆ ಮತ್ತು ಶಾಲೆಯ ಮಕ್ಕಳಿಗೆ ಸಂಚರಿಸಲು ಅನಾನುಕೂಲವಾಗುತ್ತಿದೆ ಎಂದು ತಿಳಿಸಲಾಗಿತ್ತು. ಇದಲ್ಲದೇ, ಸರ್ವೇ ಇಲಾಖೆಯವರು ಸಹ ಸರ್ವೇ ಕಾರ್ಯಕೈಗೊಂಡು ನಕ್ಷೆಯನ್ನು ತಯಾರಿಸಿ ಕಟ್ಟಡವನ್ನು ಕಟ್ಟುತ್ತಿರುವ ಸ್ಥಳವು ಕಟ್ಟಡ ಕಟ್ಟುತ್ತಿರುವ ಮಾಲೀಕರಿಗೆ ಸೇರಿಲ್ಲವಾದ್ದರಿಂದ ಸದರಿ ಕಟ್ಟಡವು ಅಕ್ರಮ ಕಟ್ಟಡವಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು, ಈ ಬಗ್ಗೆ ಎದುರುದಾರರುಗಳಿಗೆ ತಿಳಿಸಿದ್ದರೂ ಸಹ ಎದುರುದಾರರು ರಾಜಕೀಯ ಒತ್ತಡಕ್ಕೆ ಮಣಿದು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. 2ನೇ ಎದುರುದಾರರು ಸಹ ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಪರವಾನಗೆ ಪಡೆಯದೇ ಕಟ್ಟುತ್ತಿರುವ ಕಟ್ಟಡದ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ತೊಂದರೆ ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮರ್ಣೆ ಗ್ರಾಮದ ಸರ್ವೇನಂಬರ್ 498/2 ರಲ್ಲಿ 0.10 ಎಕರೆ ಸರ್ಕಾರಿ ಜಮೀನನ್ನು ಶರಾಬು ಅಂಗಡಿ ಬಗ್ಗೆ ಕಾಯ್ದಿರಿಸಿದ ಜಮೀನಾಗಿರುತ್ತದೆ. ಇದು ಅಬಕಾರಿ ಇಲಾಖೆಯ ಸುಪರ್ದಿನಲ್ಲಿರುತ್ತದೆ. ಆದ್ದರಿಂದ, ಅತಿಕ್ರಮಣವನ್ನು ತೆರವುಗೊಳಿಸಲು ಅಬಕಾರಿ ಇಲಾಖೆಯವರೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಅಬಕಾರಿ ಇಲಾಖೆಗೆ ಪತ್ರ ಬರೆದು ಸೂಚನೆ ನೀಡಲಾಗಿರುತ್ತದೆ. ಪ್ರಸ್ತಾವಿತ ಸರ್ವೇ ನಂಬರ್ 498/2 ರಲ್ಲಿ 0.02 ಎಕರೆ ಮತ್ತು 498/1ಎ1ಎ ಯಲ್ಲಿನ 0.11 ಎಕರೆ ಸ್ಥಳವನ್ನು ಶ್ರೀಮತಿ ಮರಿಯಮ್ಮ ಕೋಂ ಅಬ್ದುಲ್ ಹುಸೇನ್ ಮತ್ತು ಸರ್ವೇ ನಂಬರ್ 498/2 ರಲ್ಲಿ ಶ್ರೀಮತಿ ಜೀನತ್ ಕೋಂ ಇಬ್ರಾಹಿಂ ಹಾಗೂ ಸರ್ವೇ ನಂಬರ್ 498/2 ರಲ್ಲಿ ಶ್ರೀಮತಿ ರೆಹಮತ್ ರವರು ಅತಿಕ್ರಮಣ ಮಾಡಿಕೊಂಡಿದ್ದು, ಅದನ್ನು ಅಬಕಾರಿ ಇಲಾಖೆಯವರು ತೆರವುಗೊಳಿಸಬೇಕಾಗಿರುತ್ತದೆ. ಸದರಿ ಅತಿಕ್ರಮಿತ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದರಿಂದ ಅನಧಿಕೃತವಾಗಿ ನಿರ್ಮಾಣಮಾಡಿರುವ ಕಟ್ಟಡವನ್ನು ಸ್ಥಳೀಯ ಗ್ರಾಮ ಪಂಚಾಯತಿ ವತಿಯಿಂದ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಡಿಯಲ್ಲಿ ಅತಿಕ್ರಮಣವನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಕಾರ್ಕಳ ತಾಲ್ಲೂಕಿನ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಯವರು ಮರ್ಣೆ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರಿಗೆ ನಿರ್ದೇಶನ ನೀಡಿರುತ್ತಾರೆ. ಇದಲ್ಲದೇ, ದೂರುದಾರರು ಸರ್ಕಾರಿ ಭೂಮಿಯನ್ನು ಅತಿಕ್ರಮಣದಾರರು ಅತಿಕ್ರಮಿಸಿ ದಾರಿಯ ಬಳಕೆಗೆ ತಡೆವೊಡ್ಡಿರುತ್ತಾರೆ ಎಂಬುದಾಗಿ ಆರೋಪಿಸಿರುವುದರಿಂದ, ಮರ್ಣೆ ಗ್ರಾಮದ ಗ್ರಾಮ ಪಂಚಾಯತಿ ವತಿಯಿಂದ ಕ್ರಮ ಜರುಗಿಸಬೇಕಾಗಿರುತ್ತದೆ. ತಾನು ದಿ:31/03/2013 ರಂದು ಕರ್ತವ್ಯದಿಂದ ನಿವೃತ್ತಿ ಹೊಂದಿರುತ್ತೇನೆಂದು, ಅತಿಕ್ರಮಿತ ಜಾಗದ ಬಗ್ಗೆ ಈಗಾಗಲೇ ಅಸಲು ದಾವೆ ಸಂಖ್ಯೆ:101/2014 ಅನ್ನು ಹೂಡಲಾಗಿರುತ್ತದೆ ಎಂದು ಆದ್ದರಿಂದ, ಇದರಲ್ಲಿ ತನ್ನ ಯಾವುದೇ ಕರ್ತವ್ಯಲೋಪವಾಗಲೀ ಅಥವಾ ಪಾತ್ರವಾಗಲೀ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

3. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮರ್ಣೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಣ್ಣೆಹೊಳೆ ಎಂಬಲ್ಲಿ ವಾಸಿಸುತ್ತಿರುವ ಶ್ರೀಮತಿ ಮರಿಯಮ್ಮ ಸರ್ವೇ ನಂಬರ್ 498/1ಎ1ಎ4 ರ 0.05 ಎಕರೆ ಜಮೀನಿನಲ್ಲಿ ಕಟ್ಟಡ ಕಟ್ಟಲು ಪರವಾನಗೆ ಕೋರಿ ದಿ:21/05/2012 ರಂದು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅವು ಸರಿ ಇದ್ದ ಕಾರಣ, ಗ್ರಾಮ ಪಂಚಾಯತಿ ವತಿಯಿಂದ ದಿ:04/06/2012 ರಂದು ಶ್ರೀಮತಿ ಮರಿಯಮ್ಮ ಇವರಿಗೆ ಕಟ್ಟಡ ಕಟ್ಟಲು ಪರವಾನಗೆ

ನೀಡಲಾಗಿರುತ್ತದೆ. ಪರವಾನಗೆ ನೀಡಿದ 6 ತಿಂಗಳ ನಂತರ ಶ್ರೀ ಮೊಹಮ್ಮದ್ ಮೀರಾ (ದೂರುದಾರರು) ಎಂಬುವವರು ಸದರಿ ಶ್ರೀಮತಿ ಮರಿಯಮ್ಮ ಇವರು ಸರ್ಕಾರಿ ಜಮೀನಿನಲ್ಲಿ ಕಟ್ಟಡವನ್ನು ರಚಿಸಿರುತ್ತಾರೆಂದು ತಿಳಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಕಟ್ಟಡ ರಚನೆಯು ಸರ್ಕಾರಿ ಜಮೀನಿನಲ್ಲಿ ಇರುತ್ತದೋ ಅಥವಾ ಖಾಸಗಿ ಜಮೀನಿನಲ್ಲಿ ಇರುತ್ತದೋ ಎಂದು ಗುರುತಿಸಲು ಕಾರ್ಕಳದ ತಹಶೀಲ್ದಾರ್‌ರವರಿಗೆ ದಿ:17/01/2013 ರಂದು ಪತ್ರ ಬರೆದು ಕೋರಲಾಗಿತ್ತು. ಕಂದಾಯ ಇಲಾಖೆಯಿಂದ ಕಟ್ಟಡ ಕಟ್ಟುತ್ತಿರುವ ಜಮೀನಿನ ಮಾಹಿತಿಯು ಲಭ್ಯವಾಗದ ಕಾರಣ ಶ್ರೀಮತಿ ಮರಿಯಮ್ಮ ಇವರಿಗೆ ವಿದ್ಯುತ್ ಅಳವಡಿಸಲು ಗ್ರಾಮ ಪಂಚಾಯತಿ ವತಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದಿಲ್ಲ. ಇದಲ್ಲದೇ, ತಾನು ದಿ:15/07/2013 ರಂದು ಕಡ್ತಲ ಗ್ರಾಮ ಪಂಚಾಯತಿಗೆ ವರ್ಗಾವಣೆಯಾಗಿರುತ್ತೇನೆಂದು ತಿಳಿಸಿರುತ್ತಾರೆ.

4. ಈ ಹಂತದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರು ದಿ:05/06/2014 ರಂದು ಉಡುಪಿ ಜಿಲ್ಲಾ ಪ್ರವಾಸದ ಕಾಲದಲ್ಲಿ ದೂರುದಾರರು ಹಾಗೂ ಎದುರುದಾರರು ಹಾಜರಿದ್ದು, ಪ್ರಕರಣದಲ್ಲಿ ಕೈಗೊಂಡ ಕ್ರಮದ ಬಗ್ಗೆ ವಿಚಾರಿಸಲಾಗಿ ಅತಿಕ್ರಮಣವು ತೆರವುಗೊಳ್ಳದೇ ಇರವುದು ಕಂಡು ಬಂದ ಕಾರಣ, ಗೌರವಾನ್ವಿತರು "ಮರ್ಣೆ ಗ್ರಾಮದ ಸರ್ವೆ ನಂಬರ್ 498/1ಎ1ಎ ಮತ್ತು ಸರ್ವೆ ನಂಬರ್ 498/2 ಹಾಗೂ ಸರ್ಕಾರಿ ಜಾಗಗಳನ್ನು ಖುದ್ದಾಗಿ ಪರಿಶೀಲಿಸಿ ಅಕ್ರಮವಾಗಿ ಅತಿಕ್ರಮಿಸಿಕೊಂಡಿರುವ ಎಲ್ಲ ಅತಿಕ್ರಮಣಗಳನ್ನು ತೆರವುಗೊಳಿಸಿ ಸಂಬಂಧಪಟ್ಟವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಂಡು ಎರಡು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಶ್ರೀ ಬಾಬುದೇವಾಡಿಗ, ತಹಶೀಲ್ದಾರ್, ಕಾರ್ಕಳ ತಾಲ್ಲೂಕು, ಕಾರ್ಕಳ ಇವರಿಗೆ ನಿರ್ದೇಶನ ನೀಡಿರುತ್ತಾರೆ. ಕಾರ್ಕಳ ತಹಶೀಲ್ದಾರ್‌ರವರು ವರದಿಯನ್ನು ಸಲ್ಲಿಸಿ ಅದರಲ್ಲಿ ಅತಿಕ್ರಮಣದಾರರು ಸಿವಿಲ್ ದಾವಾವನ್ನು ಹೂಡಿರುತ್ತಾರೆಂದು ಹಾಗೂ ಅದರಲ್ಲಿ ತಾತ್ಕಾಲಿಕ ತಡೆಯಾಜ್ಞೆ ಪಡೆದಿರುತ್ತಾರೆಂದು, ಅದ್ದರಿಂದ, ತೆರವು ಕಾರ್ಯ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ಸದರಿ ತಹಶೀಲ್ದಾರ್‌ರವರ ವರದಿಯ ಆಧಾರದ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಅತಿಕ್ರಮಣದಾರರು ಸಿವಿಲ್ ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ಸಿವಿಲ್ ನ್ಯಾಯಾಲಯವು ಸದರಿ ಸಿವಿಲ್ ಪ್ರಕರಣದಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನಾಗಲೀ ಅಥವಾ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವ ಬಗೆಗಾಗಲೀ ಯಾವುದೇ ಆದೇಶವನ್ನು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್‌ರವರಿಂದ ಈ ಬಗ್ಗೆ ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರುಗಳು ತಮ್ಮ ವಿವರಣೆಯನ್ನು ನೀಡಿ ಅತಿಕ್ರಮಿತ ಜಾಗವು

ಅಬಕಾರಿ ಇಲಾಖೆಗೆ ಸೇರಿದ್ದಾಗಿದೆ ಎಂದು ಈ ಬಗ್ಗೆ ಆರ್‌ಟಿಸಿ ಯಲ್ಲಿ ಇಲಾಖೆಯ ಹೆಸರಿ.. ನಮೂದಾಗಿರುವುದು ಕಂಡು ಬರುತ್ತದೆ ಎಂದು ಆದ್ದರಿಂದ, ಅಬಕಾರಿ ಇಲಾಖೆಯವರಿಗೆ ಅತಿಕ್ರಮಣವನ್ನು ತೆರವುಗೊಳಿಸಲು ತಿಳಿಸಿ ಪತ್ರ ಬರೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

6. ಈ ಹಂತದಲ್ಲಿ ಅಬಕಾರಿ ಇಲಾಖೆಯ ಅಬಕಾರಿ ನಿರೀಕ್ಷಕರಿಗೆ ಪತ್ರ ಬರೆದು ಅವರಿಂದ ಮಾಹಿತಿ ಕೋರಲಾಗಿ, ಸದರಿ ಅಬಕಾರಿ ನಿರೀಕ್ಷಕರು ತಮ್ಮ ಪತ್ರದಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ ಆರ್‌ಟಿಸಿ ಯಲ್ಲಿ ಸದರಿ ಜಮೀನು ಅಬಕಾರಿ ಇಲಾಖೆಯ ಹೆಸರಿನಲ್ಲಿ ನಮೂದಾಗಿದ್ದರೂ ಸಹ ಸದರಿ ಜಾಗವನ್ನು ಕಂದಾಯ ಇಲಾಖೆಯಿಂದ ಇದುವರೆಗೂ ಅಬಕಾರಿ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ. ಆದ್ದರಿಂದ, ಒತ್ತುವರಿ/ಅತಿಕ್ರಮಣವನ್ನು ಕಂದಾಯ ಇಲಾಖೆಯ ವತಿಯಿಂದಲೇ ತೆರವುಗೊಳಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಪ್ರಸ್ತಾವನೆಯನ್ನು ಕಂದಾಯ ಇಲಾಖೆಗೆ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಅಬಕಾರಿ ನಿರೀಕ್ಷಕರ ಪತ್ರದ ಪ್ರತಿಯನ್ನು ಕಾರ್ಕಳ ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ರವಾನಿಸಿ ಅಬಕಾರಿ ನಿರೀಕ್ಷಕರ ಪತ್ರದನ್ವಯ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ನೀಡಲು ತಿಳಿಸಲಾಗಿದ್ದು, ಅದರಂತೆ, ತಹಶೀಲ್ದಾರ್ ರವರು ವರದಿಯನ್ನು ದಿ:20/05/2017ರ ಪತ್ರದ ಮುಖೇನ ಸಲ್ಲಿಸಿರುತ್ತಾರೆ. ಸದರಿ ಪತ್ರದಲ್ಲಿ ಸರ್ವೇ ನಂ.498/2 ರಲ್ಲಿ ಮರ್ಣೆ ಗ್ರಾಮದ ಶ್ರೀಮತಿ ಮರಿಯಮ್ಮ, ಶ್ರೀಮತಿ ಜೀನತ್ ಹಾಗೂ ಶ್ರೀಮತಿ ರೆಹಮತ್ ಇವರುಗಳು ಸರ್ಕಾರಿ ಜಮೀನನ್ನು ಅತಿಕ್ರಮಿಸಿದ್ದು, ಈಗ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94(ಸಿ) ಅಡಿಯಲ್ಲಿ ಅಕ್ರಮವನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಅತಿಕ್ರಮಣವನ್ನು ತೆರವುಗೊಳಿಸಲು ಈ ಹಂತದಲ್ಲಿ ಕ್ರಮ ಜರುಗಿಸಲು ಸಾಧ್ಯವಾಗಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಅತಿಕ್ರಮಣದಾರರು ಕರ್ನಾಟಕ ಕಂದಾಯ ಕಾಯ್ದೆಯಡಿಯಲ್ಲಿ ಸಲ್ಲಿಸಿರುವ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಈ ಎಲ್ಲ ಮೇಲಿನ ಅಂಶಗಳನ್ನು ಪರಿಶೀಲಿಸಿದಲ್ಲಿ ಅತಿಕ್ರಮಣದಾರರು ಸರ್ಕಾರಿ ಜಮೀನಿನಲ್ಲಿ ಅತಿಕ್ರಮಿಸಿ ಕಟ್ಟಡ ಕಟ್ಟಿದ್ದು, ಅತಿಕ್ರಮಣವನ್ನು ಅಕ್ರಮ ಸಕ್ರಮದಡಿ ಸಕ್ರಮಗೊಳಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅಕ್ರಮ ಸಕ್ರಮ ಸಮಿತಿಯು ಈ ಬಗ್ಗೆ ತೀರ್ಮಾನ ಕೈಗೊಳ್ಳುವುದು ಬಾಕಿ ಇರುತ್ತದೆ ಎಂದು ಕಂಡು ಬರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಅತಿಕ್ರಮಣದಾರರು ಕರ್ನಾಟಕ ಭೂ ಕಂದಾಯ ಕಾಯ್ದೆ 94(ಸಿ)ರ ಅಡಿಯಲ್ಲಿ ಅತಿಕ್ರಮಣದಾರರ ಅರ್ಜಿಯ ಮೇಲೆ ಅಕ್ರಮ ಸಕ್ರಮ ಸಮಿತಿಯು ಕೈಗೊಳ್ಳುವ ತೀರ್ಮಾನವನ್ನು ಪರಿಗಣಿಸಿ, ಅತಿಕ್ರಮಿತ ಜಾಗವನ್ನು ಸರ್ಕಾರಕ್ಕೆ ಪಡೆಯುವ ಬಗ್ಗೆ ಮುಂದಿನ ಕ್ರಮ ಜರುಗಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ

ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 28/6/17.
(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 28/6/17